**ಎಸ್.ಸಿ.ಸಂಖ್ಯೆಃ10022/2025**
**ಪ್ರಾ.ಸಾ.ಸಂಖ್ಯೆಃ 3**
**ಚಾ.ಸಾ.ಸಂಖ್ಯೆಃ 6**

**<u>ಪೀಠಾಸೀನಾಧಿಕಾರಿಗಳು, 03 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು , ಬಾಗಲಕೋಟೆ, ಉಪಸ್ಥಿತಿಃ ಮುಧೋಳ</u>**

**ಎಸ್.ಸಿ.ಸಂಖ್ಯೆಃ 10022/2025**

| | |
|---|---|
| ಹೆಸರುಃ | ಶಿವಾನಂದ ಬಟಕುರ್ಕಿ |
| ತಂದೆಯ ಹೆಸರುಃ | ಗೋವಿಂದಪ್ಪ |
| ವಯಸ್ಸುಃ | **26** ವರ್ಷ |
| ಉದ್ಯೋಗಃ | ಒಕ್ಕಲುತನ |
| ವಾಸಃ | ದಾದನಟ್ಟಿ |

**ಸಾಕ್ಷಿಯನ್ನು ದಿಃ 19.02.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರವರಿಂದಃ-</u>**

**1.** ನನಗೆ ಚಾಸಾ-**11** ಇವರ ಪರಿಚಯವಿದೆ. ಈಗ ನಾನು ನೋಡುತ್ತಿರುವ ನಿಪಿ-**8** ಪಂಚನಾಮೆಯ ಮೇಲೆ ನನ್ನ ಸಹಿ ಇದೆ. ( ಪಂಚನಾಮೆ ಮೇಲಿನ ಸಾಕ್ಷಿಯ ಸಹಿಯನ್ನು ನಿಪಿ-**8**(ಬಿ) ಅಂತ ಗುರುತಿಸಲಾಯಿತು). ನನಗೆ ಅಲ್ಲಿ ಏನು ವಿಷಯ ಬರೆದುಕೊಂಡಿದ್ದಾರೆ ಅಂತ ಗೊತ್ತಿಲ್ಲ.

(ಈ ಸಮಯದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರು ಪ್ರತಿಕೂಲ ಪ್ರವೃತ್ತಿಯನ್ನು ತೋರುತ್ತಿದ್ದು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಕೋರಿಕೊಂಡಿದ್ದು ಅದು ನಿಜವೆಂದು ಕಂಡು ಬಂದಿದ್ದರಿಂದ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು. )

**<u>ಪಾಟಿಸವಾಲು: ಸರ್ಕಾರಿ ಅಭಿಯೋಜಕರಿಂದಃ-</u>**

**1.** ದಿ: **15.02.2023** ರಂದು ಮಧ್ಯಾಹ್ನ **12** ರಿಂದ **1-00** ಗಂಟೆಗೆಯವರೆಗೆ ಚಾಸಾ-**11** ಇವರು ತೋರಿಸಿದಂತೆ ದಾದನಟ್ಟಿ ಗ್ರಾಮದ ಜಿ.ಆರ್.ಬಿ.ಸಿ. ಕೇನಾಲ ಹತ್ತಿರ ಬ್ಯಾನರ ಹರಿದ ವಿಚಾರವಾಗಿ ಪಂಚನಾಮೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಅದೇ ವಿಷಯವಾಗಿ ನಿಪಿ-**8** ನ್ನು ತಯಾರಿಸಿದ್ದು, ನಮಗೆ ಓದಿ ಹೇಳಿದ ನಂತರ ನಾನು ಹಾಗೂ ಚಾಸಾ-**7** ಅದಕ್ಕೆ ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಅದೇ ಸಮಯದಲ್ಲಿ ನಿಪಿ-**9** ರಂತೆ ಫೋಟೊ ತೆಗೆಯಲಾಗಿದೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮದಲ್ಲಿ ನಿಪಿ-**8** ರಂತೆ ಪಂಚನಾಮೆ ಮಾಡಿ, ನಿಪಿ-**9** ರಂತೆ ಫೋಟೊ ತೆಗೆಸಿದ್ದರು ಕೂಡ ಈಗ

**ಎಸ್.ಸಿ.ಸಂಖ್ಯೆಃ 10022/2025**
**ಪ್ರಾ.ಸಾ.ಸಂಖ್ಯೆಃ 3**
**ಚಾ.ಸಾ.ಸಂಖ್ಯೆಃ 6**

ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿಸವಾಲು: ಆರೋಪಿತತ ಪರ ಶ್ರೀ. ಆರ್.ಟಿ.ಹೆಚ್. ವಕೀಲರಿಂದ: ಇಲ್ಲ.**

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ ಅದೆ.

**ಸಹಿ/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮುಧೋಳ.**